ಒಂದು ಸಂದರ್ಭವನ್ನೂ ಮತ್ತು ಹೆಚ್ಚಿನ ಅರ್ಥವನ್ನೂ ನೀಡುತ್ತವೆ.

ಕಥೆ, ಮಾತುಕತೆ, ಸಿನಿಮಾವನ್ನು ಉಪಯೋಗಿಸಿದಷ್ಟೇ ಲೀಲಾಜಾಲವಾಗಿ ಶ್ರಯಾನಾ ಮಾಹಿತಿಯನ್ನೂ ಬಳಸುತ್ತಾರೆ. ಒಬ್ಬ ಮಹಿಳೆಯ ಕಥೆಯನ್ನು ನಿರೂಪಿಸುತ್ತಲೇ ಒಂದಿಡೀ ಸಮುದಾಯದ, ಜನಾಂಗದ, ದೇಶದ ವಿಚಾರವನ್ನು ಮಂಡಿಸುತ್ತಾರೆ. ಒಂದು ಮಟ್ಟದಲ್ಲಿ ಇದು ಅಭಿಮಾನಿಯೊಬ್ಬರ ಆಶಯದ ಕಥೆಯಂತೆ ಕಂಡರೂ, ಇದು ನಿಜಕ್ಕೂ ಭಾರತದ ಎಲ್ಲ ಮಹಿಳೆಯರ ಆಶಯದ ಕಥೆ. ಭಿನ್ನ ಸ್ತರಗಳಲ್ಲಿನ ಮಹಿಳೆಯರನ್ನು ಪ್ರಾತಿನಿಧಿಕವಾಗಿರಿಸುತ್ತಲೇ, ಕೆಳವರ್ಗ, ಕೆಳಮಧ್ಯಮವರ್ಗ, ಮಧ್ಯಮ, ಮೇಲ್ಮಧ್ಯಮ ಮತ್ತು ಶ್ರೀಮಂತ ವರ್ಗಗಳ ಆಶಯವನ್ನೂ ಬಿಡಿಸಿಡುತ್ತಾರೆ. ಈ ನಿರೂಪಣೆಯಲ್ಲಿ ಜಾತಿ ಮತ್ತು ಧರ್ಮದ ವಿಚಾರಗಳು ವ್ಯಕ್ತವಾಗಿ ಇಲ್ಲವಾದರೂ ದಲಿತ ಮತ್ತು ಮುಸ್ಲಿಂ ಮಹಿಳೆಯರ ಆಶೋತ್ತರಗಳನ್ನು ಗ್ರಹಿಸುತ್ತಾ ಆ ಆಯಾಮವನ್ನೂ ಸೂಕ್ಷ್ಮವಾಗಿ ಗ್ರಹಿಸುತ್ತಾರೆ.

ಶಾರುಖ್ ಕೆಳ ಮಧ್ಯಮವರ್ಗದ ಕುಟುಂಬದಿಂದ ಬಂದವನು, ಮುಂಬಯಿಯಲ್ಲಿ ತನ್ನ ನಟನೆಯ ಬಲದಿಂದ ತನ್ನ ಸ್ಥಾನವನ್ನು ಆಕ್ರಮಿಸಿಕೊಂಡವನು. ಅವನ ಸಿನಿಮಾಗಳಲ್ಲಿ – ಅದರಲ್ಲೂ ತಾನು ಪ್ರೀತಿಸುವ ಪಾತ್ರಗಳನ್ನು ಒಂದು ರೀತಿಯ ಉತ್ಕಟತೆ, ಘನತೆ, ಮತ್ತು ಆದರದಿಂದ ಕಾಣುವವನು. ನಾಯಕಿಯ ಸುತ್ತಮುತ್ತ ಸುಳಿಯುವ ಸ್ತ್ರೀಪಾತ್ರಗಳಿಗೆ ಬೇಕಾದ ಗೌರವವನ್ನು ಕೊಡುವವನು. ತನ್ನ ಸಂಸಾರ ಮತ್ತು ಪತ್ನಿಯ ಮೇಲಿರುವ ಪ್ರೀತಿಯನ್ನು, ಮಕ್ಕಳ ಬಗ್ಗೆ ಸದಾ ಹೆಮ್ಮೆಯನ್ನು ಸಂದರ್ಶನಗಳಲ್ಲಿ ವ್ಯಕ್ತಪಡಿಸುವವನು. ಸಂದರ್ಶನಗಳ ಮಾತುಕತೆಯಲ್ಲಿ ಒಂದು ರೀತಿಯ ಉಡಾಫೆ ಕಂಡರೂ, ಹೆಚ್ಚಿನಂಶ ತನಗೇ ಆ ಉಡಾಫೆಯನ್ನು ಆರೋಪಿಸಿಕೊಂಡು, ನಗುಮುಖ ಮತ್ತು ಹಾಸ್ಯದ ಲೇಪನವನ್ನು ಕೊಟ್ಟು ಮಾತು ಮುಂದುವರೆಸುವವನು. ಹೀಗಾಗಿ, ಶ್ರಯಾನಾಗೆ ಈತ ಒಂದು ಸ್ಫೂರ್ತಿಯ ಸೆಲೆಯಾಗಿ, ಒಂಟಿತನವನ್ನು ಕೊಲ್ಲಲು ಮತ್ತು ಆದರ್ಶ ಗಂಡಸಾಗಿ ಕಾಣಿಸುತ್ತಾನೆ. ಆದರೆ, ಇದು ಖಾಸಗಿಯ ಮಾತಾಯಿತು. ಅಂದರೆ, ಶಾರುಖ್ ಮತ್ತು ಅವನ ಪ್ರತೀಕ ಒಂದು ಗುರಿಯಾದರೆ – ಆ ಪ್ರತೀಕವನ್ನು ಸಾಧಿಸಲು ಮಹಿಳೆಯರು ಏನೆಲ್ಲಾ ಮಾಡಬಹುದು, ಮತ್ತು ಮಾಡಿದ ನಂತರವೂ ಉಳಿಯುವ ಸಾಧ್ಯತೆಗಳೇನು? ಈ ಪ್ರಶ್ನೆಗಳು ಗಹನವಾದವು ಹಾಗೂ ವಿರೋಧಾಭಾಸದಿಂದ ಕೂಡಿರುವವು. ಆದರೆ, ಅದೇ ಒಂದು ಬಿಡುಗಡೆಯ ಮಾರ್ಗವಾಗಬಹುದೇ?

ಮಧ್ಯಮವರ್ಗದ ಮಡಿವಂತಿಕೆಯ ಬಂಧನದಿಂದ ಬಿಡುಗಡೆಯೂ ಆಗಬೇಕು. ಆದೇ ಕಾಲಕ್ಕೆ ಕ್ರಾಂತಿಕಾರಿಯಾಗಿ ಎಲ್ಲ ಸಂಬಂಧಗಳನ್ನು ಕಡಿದುಕೊಳ್ಳಲೂ ಬಾರದು. ಈ ವಿರೋಧಾಭಾಸವನ್ನೇ ಶ್ರಯಾನಾ ಮತ್ತು ಆಕೆಯ ಮಾತುಕತೆಯ ಭಾಗವಾಗಿರುವ ಮಹಿಳೆಯರು ನಿಭಾಯಿಸುತ್ತಾರೆ. ಮನೆಯಲ್ಲಿ ಮಡಿವಂತಿಕೆ ಮತ್ತು ಪರ್ದಾ ಇರುವ ಸಮಯಕ್ಕೆ ಒಂದು ಟೀವಿ ಮತ್ತು ಸಿ.ಡಿ. ಪ್ಲೇಯರ್ ತಂದು ಸಾಮೂಹಿಕವಾಗಿ ಶಾರುಖ್‌ನ ಸಿನಿಮಾ ನೋಡುವುದು ಈ ರೀತಿಯ ಬಂಧನದ ಬಿಡುಗಡೆಯೂ, ಸಂಬಂಧ ಮತ್ತು ಸಾಮಾಜಿಕ ಬಂಧಕ್ಕೆ ಒಡ್ಡಿಕೊಳ್ಳುವುದೂ ಏಕಕಾಲಕ್ಕೆ ನಿಭಾಯಿಸಿದಂತಾಗುತ್ತದೆ. ಏನೇ ಸಮಸ್ಯೆ ಅಥವಾ ದ್ವಂದ್ವವಾದರೂ ಅವನ ಸಿನಿಮಾದ ಯಾವುದೋ ಒಂದು ಸಂಭಾಷಣೆ ಅಥವಾ ಅವನದೇ ಸಂದರ್ಶನದ ತುಣುಕು ಸಿಗುತ್ತದೆ. ಏನಿಲ್ಲವೆಂದರೂ ಅದೇ ನಿಮಿತ್ತವಾಗಿ ಮಹಿಳೆಯರು ತಮ್ಮೊಳಗೇ ಮಾತನಾಡಲು ವಸ್ತುವಾದರೂ ಸಿಗುತ್ತದೆ.

ಮಧ್ಯಮವರ್ಗದವರ ಸಾಧನೆಯ ಪ್ರತೀಕವಾಗಿ ಶಾರುಖ್‌ನ ಮನೆ 'ಮನ್ನತ್' ಇದೆ. ಅದರ ನಾಮಫಲಕದ ಮುಂದೆ ನಿಂತು ಸೆಲ್ಫಿಗಳನ್ನು ಕ್ಲಿಕ್ಕಿಸುವ ಜನರ ದೊಡ್ಡ ಗುಂಪೇ ಇರುತ್ತದೆ. ಈದ್ ಮತ್ತು ತನ್ನ ಹುಟ್ಟುಹಬ್ಬದ ದಿನ ಅವನು ಅದರ ಶಿಖರದಿಂದ ಎಲ್ಲರಿಗೂ ತನ್ನ ದರ್ಶನವನ್ನು ಕೊಟ್ಟು ಗಾಳಿಮುತ್ತುಗಳನ್ನು ಹಾರಿಸುತ್ತಾನೆ. ಆದರೆ, ಆ ಗುಂಪಿನಲ್ಲಿ ಕಾಣುವುದು ಹೆಚ್ಚಿನಂಶ ಗಂಡಸರೇ.